# ಕರ್ನಾಟಕ ಸರ್ಕಾರ

ಸಂ:ಗ್ರಾಅಪ 208 ಗ್ರಾನೀಸ(4)2014

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:08.12.2014.

## ಸುತ್ತೋಲೆ

ವಿಷಯ: ಕುಡಿಯುವ ನೀರಿನ ಗುಣಮಟ್ಟ ಪರೀಕ್ಷಿಸುವ FTKಗಳ ಬಳಕೆ ಕುರಿತು.

---

ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲಾ 5629 ಗ್ರಾಮ ಪಂಚಾಯಿತಿಗಳಿಗೆ ಈಗಾಗಲೇ ಕುಡಿಯುವ ನೀರಿನ ಪರೀಕ್ಷಾ (FTK)ಕಿಟ್‌ಗಳನ್ನು ಪೂರೈಸಲಾಗಿದೆ. ಅವುಗಳ ಬಳಕೆ ಕುರಿತಂತೆ ಸ್ಥಳೀಯ ಪಂಚಾಯತ್ ಸಿಬ್ಬಂದಿಗಳಿಗೆ ವಾಟರ್‌ಮನ್ ಹಾಗೂ ಮತ್ತಿತರೆ ಪಂಚಾಯಿತಿ ಸದಸ್ಯರುಗಳಿಗೂ ಸಹ ತರಬೇತಿ ಹಾಗೂ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು 2008-09ರಿಂದ ಇಲ್ಲಿಯವರೆವಿಗೂ 3 ಬಾರಿ TEERI, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಸ್ಥಳೀಯ ಸ್ವಯಂ ಸೇವಾ ಸಂಸ್ಥೆಗಳ ಸಹಯೋಗದಲ್ಲಿ ನಡೆಸಲಾಗಿದೆ. ಇವುಗಳ ಬಳಕೆಗಾಗಿ ಅಗತ್ಯವಿರುವ ರಾಸಾಯನಿಕ (Reagents)ಗಳನ್ನು ಸಹ ಅರ್ಹ ಸಂಸ್ಥೆಗಳ ಮುಖೇನ ಚಾಲ್ತಿಯಲ್ಲಿರುವ ಪಾರದರ್ಶಕ ಟೆಂಡರ್ ಪ್ರಕ್ರಿಯೆ ಮುಖೇನ ಪಡೆದುಕೊಳ್ಳಲು ತಿಳಿಸಲಾಗಿದೆ. ಈ ಸಲುವಾಗಿ ಈಗಾಗಲೇ ನೇಮಕವಾಗಿರುವ ಸ್ಥಳೀಯ BRC / CRCಗಳ ಸೇವೆಯನ್ನು Pre & Post monsoon ಅವಧಿಯಲ್ಲಿ ನೀರಿನ ಮಾದರಿಗಳ ಪರೀಕ್ಷಾ ಪ್ರಕ್ರಿಯೆ ಸಲುವಾಗಿ ಪಡೆದುಕೊಳ್ಳಲು ವ್ಯವಸ್ಥೆ ಮಾಡಲಾಗಿದೆ.

ಆದಾಗ್ಯೂ ಸಹ ನಿರೀಕ್ಷಿತ ಪ್ರಮಾಣದಲ್ಲಿ ಎಲ್ಲಾ ಕುಡಿಯುವ ನೀರಿನ ಜಲಮೂಲಗಳ ನೀರಿನ ಇಳುವರಿ ಮತ್ತು ನೀರಿನ ಗುಣಮಟ್ಟದ ಪರೀಕ್ಷೆ / ಸಮೀಕ್ಷೆ ನಿಗಧಿತ ಕಾಲಮಿತಿಯೊಳಗೆ ಆಗದಿರುವುದು ಹಾಗೂ ನೀರಿನ ಗುಣಮಟ್ಟದ ಪರೀಕ್ಷಾ ವರದಿಯನ್ನು IMISನಲ್ಲಿ ಆಯಾ ಜಿಲ್ಲಾವಾರು ಇಂಧೀಕರಿಸದಿರುವುದನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿದೆ. ಇದು ಬಹಳ ಪ್ರಾಮುಖ್ಯ ಕೆಲಸವಾಗಿದ್ದು, ಕ್ರಿಯಾ ಯೋಜನೆ ತಯಾರಿಕೆಗೆ ಮೂಲಾಧಾರವಾಗಿದೆ. ಆದುದರಿಂದ, ಈ ಬಗ್ಗೆ ವಿಶೇಷ ಕಾಳಜಿ ವಹಿಸಿ ಜವಾಬ್ದಾರಿಯಿಂದ ಸ್ಥಳೀಯ ನೀರು ಮತ್ತು ನೈರ್ಮಲ್ಯ ಇಲಾಖೆಯ ಕಾರ್ಯಪಾಲಕ ಇಂಜಿನಿಯರ್, ಭೂವಿಜ್ಞಾನಿಗಳು ಮತ್ತು BRC / CRCಗಳನ್ನೊಳಗೊಂಡಂತೆ ಜವಾಬ್ದಾರಿಯಿಂದ ಕರ್ತವ್ಯ ನಿರ್ವಹಿಸಬೇಕೆಂದು ಮತ್ತೊಮ್ಮೆ ನಿರ್ದೇಶಿಸಿದೆ.

**ಕುಡಿಯುವ ನೀರಿನ ಪರೀಕ್ಷಾ ಕಿಟ್ (FTK)ಗಳನ್ನು ತತ್‌ಕ್ಷಣದಿಂದ** ಸ್ಥಳೀಯ **ಗ್ರಾಮ ಪಂಚಾಯತ್‌ನ ವಾಟರ್‌ಮನ್ ಸುಪರ್ದಿಯಲ್ಲಿರುವಂತೆ ನೋಡಿಕೊಳ್ಳಬೇಕು.** ಅವುಗಳ ಬಳಕೆ ಕುರಿತಂತೆ ಸೂಕ್ತ ಮಾರ್ಗದರ್ಶನಗಳನ್ನು ನೀಡಬೇಕು ಮತ್ತು ಅಗತ್ಯವಿದ್ದಲ್ಲಿ ಪುನಃ ತರಬೇತಿಗೊಳಪಡಿಸಬೇಕು. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಕಾರ್ಯನಿರ್ವಾಹಕ ಅಧಿಕಾರಿ,

....2

ತಾಲ್ಲೂಕು ಪಂಚಾಯತಿರವರುಗಳು ಈ ಸಂಬಂಧ ಎಲ್ಲಾ ಪ್ರಕ್ರಿಯೆಗಳನ್ನು ಕರಾರುವಕ್ಕಾಗಿ ಗಮನಿಸಿ ಮಾಹಿತಿ ನಿರ್ವಹಣೆ ಮಾಡಬೇಕೆಂದು ತಿಳಿಸಿದೆ.

11/12/14

(ರಾಮಕೃಷ್ಣ)
ಸರ್ಕಾರದ ಉಪ ಕಾರ್ಯದರ್ಶಿ (ಗ್ರಾನೀಸ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
**ಇಮೇಲ್: rk3452000@gmail.com**
**ಫೋನ್:22032806, ಫ್ಯಾಕ್ಸ್:22203175**

**ಪ್ರತಿಯನ್ನು:**

1. ರಾಜ್ಯ ಎಲ್ಲಾ (30) ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
2. ಮುಖ್ಯ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, KHB Complex, 2ನೇ ಮಹಡಿ, ಕಾವೇರಿ ಭವನ **ಬೆಂಗಳೂರು-09** ಇವರ ಮಾಹಿತಿಗಾಗಿ ಹಾಗೂ ಮುಂದಿನ ಸೂಕ್ತ ಕ್ರಮಕ್ಕಾಗಿ ಕೋರಿ ಕಳುಹಿಸಿದೆ.
3. ರಾಜ್ಯದ ಎಲ್ಲಾ (8) ಅಧೀಕ್ಷಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವೃತ್ತಗಳು.
4. ರಾಜ್ಯದ ಎಲ್ಲಾ (38) ಕಾರ್ಯಪಾಲಕ ಇಂಜಿನಿಯರ್‌ಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗಗಳು.
5. ರಾಜ್ಯದ ಎಲ್ಲಾ (176) ತಾಲ್ಲೂಕು ಪಂಚಾಯತ್‌ಗಳ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಮಾಹಿತಿಗಾಗಿ ಮತ್ತು ಗ್ರಾಮ ಪಂಚಾಯಿತಿಗಳ PDOಗಳಿಗೆ ಈ ಸಂಬಂಧ ಸೂಕ್ತ ತಿಳುವಳಿಕೆ ನೀಡುವ ಸಲುವಾಗಿ ಕಳುಹಿಸಿದೆ.